ನನ್ನ ಪ್ರಾಣ ಉಳಿಸಿ ಪುಣ್ಯ ಕಟ್ಟಿಕೋ. ಇನ್ನೂ ಹೆಚ್ಚು ಮಾತಾಡುವ ಶಕ್ತಿಯೀಗ ನನ್ನಲ್ಲಿ ಉಳಿದಿಲ್ಲ. ಒಂದೆರಡು ಕ್ಷಣದಲ್ಲಿ ನಿನ್ನ ತೀರ್ಮಾನವಾದರೆ ಮಾತ್ರ ನಾನು ಬದುಕುವೆ. ಇ... ಲ್ಲ... ವಾ... ದ... ರೆ, ನನ್ನನ್ನು... ಕೊಂದ... ಪಾಪ... ನಿನಗೆ... ಖಂಡಿತ... ತಟ್ಟುತ್ತದೆ...''

ರಣಹಸಿವಿನಿಂದ ನಿತ್ರಾಣಗೊಂಡು ಏದುಸಿರು ಬಿಡುತ್ತಿದ್ದ ಹುಲಿಮರಿಯನ್ನು ನೋಡಿ ಪುಣ್ಯಕೋಟಿ ಸಂಕಟದಿಂದ ತಳಮಳಿಸತೊಡಗಿತು. ಆತ್ಮಸಾಕ್ಷಿಗೇ ಸವಾಲೆಸೆದಾಗ ಏನು ಮಾಡುವುದೆಂದು ಯೋಚಿಸುತ್ತ ನಿಲ್ಲುವ ಸಂದರ್ಭ ಅದಾಗಿರಲಿಲ್ಲ. ವೇದಾಂತ–ಸಿದ್ಧಾಂತ, ಧರ್ಮ–ದೇವರು, ಪಾಪ–ಪುಣ್ಯಗಳ ಹೆಸರಿನಲ್ಲಿ ಅನುಕೂಲಸಿಂಧು ಜಾಲ ಹೆಣೆದು, ನಿರಂತರ ಶೋಷಣೆ ಮಾಡುತ್ತಿರುವ ಮನುಷ್ಯನ ದುರ್ವಿಚಾರಗಳ ಬಗ್ಗೆ ಈಗಾಗಲೇ ಅದಕ್ಕೆ ಸಾಕಷ್ಟು ಜಿಗುಪ್ಸೆ ಹುಟ್ಟಿತ್ತು. ಸೃಷ್ಟಿಚಕ್ರದ ನಿಯಮಗಳನ್ನೇ ತಿರುಚಿ ಕೆಲವು ಪ್ರಾಣಿಗಳಿಗೆ ಪಾಪದ ಹಣೆಪಟ್ಟಿ ಹಚ್ಚಿ, ತನ್ನಂಥ ಮುಗ್ಧಜೀವಿಗಳ ಬಗ್ಗೆ ಕಲ್ಪಿತ ಕಥೆಗಳನ್ನು ಸೃಷ್ಟಿಸಿ ಹಾಡುತ್ತ ಬಂದಿರುವ ಮಾನವರ ಸ್ವಾರ್ಥದ ಬಗ್ಗೆಯೂ ಪುಣ್ಯಕೋಟಿ ಭ್ರಮನಿರಸನಗೊಂಡಿತ್ತು. "ಹಿಂಸೆ–ಅಹಿಂಸೆ, ಪಾಪ–ಪುಣ್ಯದ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಕೂಡುವ ಸಮಯ ಇದಲ್ಲ. ಅದರ ಬದಲು, ಹಸಿವಿನಿಂದ ಸಾಯುತ್ತಿರುವ ಈ ಹುಲಿಮರಿಗೆ ಹಾಲು ಕುಡಿಸುವುದೇ ನಿಜವಾದ ಧರ್ಮ. ಇಲ್ಲದಿದ್ದರೆ ಧರ್ಮವೆಂಬುದಕ್ಕೆ ಏನರ್ಥ, ಅದಾವ ಬೆಲೆ? ಈ ಹಾಳು ತತ್ವಸಿದ್ಧಾಂತಗಳ ಗೋಳು ಸಾಕು. ನಿಜಕ್ಕೂ ತಬ್ಬಲಿಯೇ ಆಗಿರುವ ಹುಲಿಮರಿಗೆ ತಾನು ತಾಯಿಯಾಗಿ ಮೊದಲು ಹಾಲು ಕುಡಿಸಬೇಕು, ಹೌದು..." ಎಂದುಕೊಂಡದ್ದೇ– "ಬಾ ಕಂದಾ ನನ್ನ ಕರುವಿನೊಂಡನೇ ನೀನೂ ನನ್ನ ಕೆಚ್ಚಲಿಗೆ ಬಾಯಿ ಹಾಕಿ, ಈ ಕಡೆಯ ಎರಡು ಮೊಲೆಗಳ ಹಾಲು ಕುಡಿಯಬಾ. ನೀನೂ ನನ್ನ ಮಗನಿದ್ದ ಹಾಗೆ. ಹಸಿವು ಹಿಂಗಿಸಿ ನಿನ್ನನ್ನು ಬದುಕಿಸುವುದೇ ನನ್ನ ತಾಯಿಧರ್ಮ. ಮೊಲೆ ಕುಡಿಸಲು ನಾನೀಗಲೇ ಸಿದ್ಧಳಾಗಿರುವೆ. ಬಾ... ಕಂದಾ ಬಾ..." ಎನ್ನುತ್ತ ತಾನೇ ಹುಲಿಮರಿಯ ಕಡೆಗೆ ಕೆಚ್ಚಲ ಭಾಗವನ್ನು ತೋರಿಸತೊಡಗಿತು, ಪುಣ್ಯಕೋಟಿ. ಅದನ್ನೆಲ್ಲ ನೋಡುತ್ತಿದ್ದ ಕರುವಿಗೆ ಇಲ್ಲೇನು ನಡೆಯುತ್ತಿದೆ ಎಂಬುದೇ ತಿಳಿಯುತ್ತಲಿಲ್ಲ! ಉಳಿದ ಆಕಳುಗಳಿಗೆಲ್ಲ ಅದೊಂದು ಸೋಜಿಗದ ದೃಶ್ಯವಾಗಿ ಕಾಡತೊಡಗಿತು. ಹುಲಿಮರಿಯು, ಪುಣ್ಯಕೋಟಿಯ ಹತ್ತಿರವೇ ಬರುತ್ತಿರುವುದನ್ನು ನೋಡಿದ ಆ ಹಸುಗಳೆಲ್ಲವೂ ಹೌಹಾರಿ ದೊಡ್ಡಿಯ ತುಂಬ ದೊಡ್ಡ ಗದ್ದಲವನ್ನೇ ಆರಂಭಿಸಿಬಿಟ್ಟವು. ಆ ಕೋಲಾಹಲದ ನಡುವೆಯೇ, ತಾಯ ಮಮತೆಯಿಂದ ಮೊಲೆಹಾಲು ಕುಡಿಸಲು ಕರೆದ ಪುಣ್ಯಕೋಟಿಯ ಕೆಚ್ಚಲಿಗೆ ಇನ್ನೇನು ಹುಲಿಮರಿ ಬಾಯಿ ಹಾಕಬೇಕು, "ಡಂ... ಡಮಾರ್" ಎಂಬ ಬಂದೂಕಿನ ಶಬ್ದ! ಮೊಲೆಗೆ ಬಾಯಿಡುವ ಮೊದಲೇ ಹುಲಿಮರಿ ಆಕ್ರಂದನಗೈಯುತ್ತ ನೆಲಕ್ಕುರುಳಿತ್ತು!!


**ಬಸವರಾಜ ಸಾದರ**

ಆಕಾಶವಾಣಿಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರು. 'ತಪ್ದಂಡ' (ಕಥಾಸಂಕಲನ), 'ಸಿಸಿಫಸ್‌ರ ಸುತ್ತು', 'ಬುದ್ಧನ ಭಿಕ್ಷಾಪಾತ್ರೆ' (ಕವನ ಸಂಕಲನಗಳು), 'ಅನುಮಿತಿ' (ವಿಮರ್ಶೆ), 'ಮೃದುವಾಗಿ ಮುಟ್ಟು', 'ತಮಂಧಕ್ಕೆ ಬೆಳಗು', 'ಹೊಸ ಆಲೋಚನೆ' (ವೈಚಾರಿಕ ಪ್ರಬಂಧಗಳ ಸಂಗ್ರಹಗಳು) – ಅವರ ಕೆಲವು ಕೃತಿಗಳು. 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು' ಅವರ ಪಿಎಚ್‌.ಡಿ. ಪ್ರಬಂಧವಾಗಿದೆ.